

ಡಾ.ವಿನೋದ ಛೆಬ್ಬಿ

ಬದಲಾದರೆ ಬದುಕು ಎಂದು ಒಬ್ಬರು, ಬದಲಾದರೆ ಉಳಿವಿಲ್ಲ ಎಂದು ಇನ್ನೊಬ್ಬರು ಅನ್ನುತ್ತಿದ್ದರೆ ದಾಂಪತ್ಯಕ್ಕೆ ಭವಿಷ್ಯ ಎಲ್ಲಿದೆ?

# 137: ಪತಿಯೆಂಬ ಮಗು-5

ಕೀರ್ತಿಯ ದಾಂಪತ್ಯ ಚಿಕಿತ್ಸೆ ನಡೆದಿದೆ. ಸಮರ್ಥಳೂ ಆತ್ಮವಿಶ್ವಾಸಿಯೂ ಆದವಳು ಮಿತಿಮೀರೆಗಳನ್ನು ಅರಿಯದೆ ಮಗುವಿನಂತೆ ವರ್ತಿಸುವ ಗಂಡನಿಗೆ ಅಂಟಿಕೊಂಡಿರುವ ಕಾರಣವೇನು ಎಂದು ಯೋಚಿಸುತ್ತ ಕೀರ್ತಿ-ಕಿಶೋರ ಬರುವುದನ್ನು ಕಾಯುತ್ತಿದ್ದೆ. ಆದರೆ ಬಂದಿದ್ದು ಕೀರ್ತಿಯೊಬ್ಬಳೆ.

ಅಂದಹಾಗೆ, ಮೊನ್ನೆ ಕೀರ್ತಿಯು ಕಿಶೋರನಿಗೆ ತನ್ನ ನಿರ್ಧಾರ ತಿಳಿಸಿದಳಂತೆ. ಈ ದಾಂಪತ್ಯ ಸಾಧ್ಯವಿಲ್ಲ, ಬಹುಬೇಗ ಬೇರೆಯಾಗುತ್ತಿದ್ದೇನೆ ಎಂದಳಂತೆ. ಕಿಶೋರ ಅವಳ ಕಾಲು ಹಿಡಿದು, ತಪ್ಪಾಯಿತು, ನಾನಿನ್ನು ನಿನ್ನಂತೆ ನಡೆದುಕೊಳ್ಳುತ್ತೇನೆ ಎಂದನಂತೆ. ಇವೊತ್ತು ಅವನೂ ಇಲ್ಲಿಗೆ ಬರುತ್ತಿದ್ದಾನೆ ಎಂದು ಉತ್ಸಾಹದಿಂದ ಹೇಳಿದಳು. ಆಫೀಸಿನಿಂದ ನೇರವಾಗಿ ಬರುತ್ತಿರುವುದರಿಂದ ಒಂದು ಗಂಟೆ ತಡವಾಗುತ್ತದೆ ಎಂದಳು. ಅವನ ಬರುವಿಕೆಯನ್ನು ಕಾಯುತ್ತ ನಮ್ಮ ಮಾತುಕತೆ ಶುರುವಾಯಿತು.

'ಕೀರ್ತಿ, ಕಿಶೋರನಲ್ಲಿ ಇಷ್ಟೊಂದು ಬೇಡದ ವರ್ತನೆಗಳು ಇದ್ದರೂ ಅವನಿಗೆ ಅಂಟಿಕೊಂಡಿರುವುದಕ್ಕೆ ಏನು ಕಾರಣ ಇರಬಹುದು ಎಂದು ಯೋಚಿಸುತ್ತಿದ್ದೆ.' ನಾನೆಂದೆ. ಆಕೆ, 'ನಾನು ಇಷ್ಟಪಟ್ಟ ಮೊದಲ ಗಂಡು ಅವನು. ಚೆಲುವ. ಸುತ್ತಾಡಲು ಒಳ್ಳೆಯ ಜತೆಗಾರ. ಅವನು ನನ್ನ ಶರೀರವನ್ನು ಬಯಸುವಾಗ ಖುಷಿಯಾಗುತ್ತದೆ. ಅವನನ್ನು ಬಿಟ್ಟರೆ ಅಂಥವನು ಇನ್ನೊಬ್ಬ ಸಿಗಲಿಕ್ಕಿಲ್ಲ ಅಂತ ಭಯವಿದೆ.' ಎಂದು ಪಟ್ಟಿ ಒಪ್ಪಿಸಿದಳು.

'ಅವನ ಬಗೆಗೆ ನಿಮ್ಮ ಅನಿಸಿಕೆ, ಭಯಗಳನ್ನು ಪಕ್ಕಕ್ಕಿಟ್ಟು ಹೀಗೆ ಯೋಚಿಸಿ: ಕಿಶೋರ ನಿಮ್ಮ ಸಲುವಾಗಿ ಯಾವುದಾದರೂ ರೀತಿನಡತೆಗಳನ್ನು ಬೆಳೆಸಿಕೊಳ್ಳಲು ಯತ್ನಿಸಿದ್ದಾನೆಯೆ?'

ಕೀರ್ತಿ ಎರಡು ಘಟನೆಯನ್ನು ವಿವರಿಸಿದಳು.

ಒಂದು: ಇವಳಿಗೆ ತವರಿನಲ್ಲಿ ಡೆಂಗಿ ಆದಾಗ ಕಿಶೋರ ಭೇಟಿಯಾಗಲೇ ಎಂದು ಹಲವು ಸಲ ಕೇಳಿದ್ದನಂತೆ. ಇವಳು ಅಗತ್ಯವಿಲ್ಲ ಎಂದಂದು, ಕೊನೆಗೆ ಬಾ ಎಂದಳು. ಅವನೇನು ಮಾಡಿದ? 'ರಾತ್ರಿ ಅಪ್ಪನಿಗೆ ಬೆನ್ನುನೋವಿತ್ತು. ಮುಲಾಮು ಉಜ್ಜುತ್ತ ಮೂರರ ತನಕ ಎಚ್ಚರಿದ್ದು ಅಪ್ಪನ ಕೋಣೆಯಲ್ಲೇ ಮಲಗಿದ್ದೆ. ನಿದ್ರೆ ಸರಿಯಾಗಿ ಆಗಿಲ್ಲ. ಬರಲು ಆಗುವುದಿಲ್ಲ.' ಎಂದು ಸಂದೇಶ ಕಳಿಸಿದ. ಗಾಬರಿಯಾಗಿ ಮಾವನನ್ನು ವಿಚಾರಿಸಿದಾಗ ತಿಳಿದಿದ್ದೇ ಬೇರೆ. ಹೌದು, ಬೆನ್ನುನೋವಿತ್ತು. ಆದರೆ ಅವರು 11ಗಂಟೆಗೇ ಮಲಗಿಕೊಂಡರಂತೆ. ಕಿಶೋರ ಅವರ ಸಹಾಯಕ್ಕೆ ಹೋಗದೇ ತನ್ನಷ್ಟಕ್ಕೆ ತಾನು ಮಲಗಿದ್ದಾನೆ!

ಎರಡು: ಕಿಶೋರ ಆಫೀಸಿನ ವತಿಯಿಂದ ಅಮೆರಿಕಕ್ಕೆ ಹೋಗುವ ಪ್ರಸಂಗ ಬರುವಾಗ ಕೀರ್ತಿಗೂ ಆಹ್ವಾನಿಸಿದ್ದನಂತೆ. ಇವಳು ಕಾಲೇಜಿನ ಕೆಲಸದ ಕಾರಣದಿಂದ ಎರಡು ವಾರ ರಜೆ ಸಿಗುವುದಿಲ್ಲ ಎಂದಳು. ಅವನೇ ಒತ್ತಾಯಿಸಿ ಒಂದು ವಾರದ ಮಟ್ಟಿಗೆ ಇವಳನ್ನು ಒಪ್ಪಿಸಿದ. ಇವಳು ಅಮೆರಿಕೆಯಲ್ಲಿ ಗಂಡನೊಡನೆ ಸುತ್ತಾಡುವ ಕನಸು ಕಾಣುತ್ತ, ಕೊನೆಗೆ ಕೇಳಿದಾಗ ಕಿಶೋರ ಹೇಳಿದ: 'ಆಫೀಸಿನವರು ನನ್ನ ಟಿಕೆಟ್ ತೆಗೆಸಿದ್ದಾರೆ. ನಿನ್ನ ಟಿಕೆಟ್ಟಿಗಾಗಿ ನನ್ನಲ್ಲಿ ಹಣವಿಲ್ಲ.' ಇವಳು ತನ್ನ ಖರ್ಚನ್ನು ತಾನೇ ಕೊಡುತ್ತೇನೆ ಎಂದರೆ ಏನೆಂದ? 'ನಾವಿಬ್ಬರೂ ಇಲ್ಲದಿರುವಾಗ ವಯಸ್ಸಾದ ತಾಯ್ತಂದೆಯರನ್ನು ಯಾರು ನೋಡಿಕೊಳ್ಳುತ್ತಾರೆ? ಅದಕ್ಕಾಗಿ ನೀನು ಮನೆಯಲ್ಲೇ ಇರು.'

ಈ ಪ್ರಸಂಗಗಳ ಮರ್ಮದ ಜಿಜ್ಞಾಸೆ ನಡೆಯುತ್ತ ಕೀರ್ತಿಗೆ ಅರ್ಥವಾಯಿತು. ಕಿಶೋರ ಅವಳಿಗೋಸ್ಕರ ಮಾಡಲು ಇಷ್ಟ ಎಂದು ತೋರಿಸಿಕೊಳ್ಳುತ್ತ ಆಕೆಯಲ್ಲಿ ಆಸೆ ಹುಟ್ಟಿಸುತ್ತಾನೆ. ಅಷ್ಟಕ್ಕೇ ತೃಪ್ತಿಹೊಂದಿ ಸುಮ್ಮನಿದ್ದರೆ ಚೆನ್ನಾಗಿರುತ್ತಾನೆ. ಆದರೆ ನಂಬಿ ನಿರೀಕ್ಷಿಸುತ್ತಿದ್ದರೆ ಅಥವಾ ಬೇಡಿಕೆ ಮುಂದಿಟ್ಟರೆ ಈಡೇರಿಸದೆ ಹಿಂತೆಗೆಯುತ್ತಾನೆ. ಒಂದುಸಲ ಅವನೇ ಹೇಳಿದ್ದನಂತೆ: 'ಇತರರ ಬಯಕೆಗಳನ್ನು ಈಡೇರಿಸಲು ನನಗಿಷ್ಟ. ಆದರೆ ಅದಕ್ಕೋಸ್ಕರ ಹಾಕುವ ಪರಿಶ್ರಮ, ಖರ್ಚುವೆಚ್ಚ ನೆನೆಸಿಕೊಂಡರೆ ವಿಪರೀತ ಒತ್ತಡ ಉಂಟಾಗಿ, ಅಲ್ಲೇ ನಿಂತುಬಿಡುತ್ತೇನೆ.' ಅವನಿಗೆ ಬಾಂಧವ್ಯ ಬೇಕು; ಆದರೆ ಅದನ್ನು ಗಟ್ಟಿಗೊಳಿಸುವುದಕ್ಕೆ ಅಗತ್ಯವಾದ ಪರಿಶ್ರಮ ಹಾಕಲು ಒಲ್ಲ. ಹಾಗಾಗಿ ಮಾಡುವುದರ ಬಗೆಗೆ ಮಾತಾಡುತ್ತಾನೆ, ಆದರೆ ಮಾಡಲೊಲ್ಲ. (ಸರ್ವಜ್ಞನ ವಚನ 'ಆಡದೆ ಮಾಡುವವ...' ನೆನಪಾಯಿತು.)

ನಾನು ಗಡಿಯಾರ ನೋಡುತ್ತ, 'ಹಾಗಾದರೆ ಇವೊತ್ತು ಕಿಶೋರ ಇಲ್ಲಿಗೆ ಬರುವನೆಂದು ಮಾತು ಕೊಟ್ಟಿದ್ದನಲ್ಲ, ಅದು ನಿಜವಾಗಬಹುದು ಎಂದು ಅನ್ನಿಸುತ್ತದೆಯೆ?' ಎಂದೆ. ಕೀರ್ತಿ ನನ್ನನ್ನು ನಂಬದೆ, 'ಖಂಡಿತವಾಗಿಯೂ! ಬೆಳಿಗ್ಗೆ ನನ್ನಕಾಲು ಹಿಡಿದುಕೊಂಡಿದ್ದನಲ್ಲ?' ಎಂದು ತನ್ನ ನಂಬಿಕೆಯ ಮೇಲೆ ತಾನೇ ವಿಶ್ವಾಸವನ್ನಿಡುತ್ತ ವಿಶ್ವಾಸದ ನಗೆ ಬೀರಿದಳು. ನನಗೇನೋ ಹೊಳೆದು, ಕೀರ್ತಿಯನ್ನು ಪ್ರಶ್ನಿಸಲು ನಿರ್ಧರಿಸಿದೆ.

'ಕೀರ್ತಿ, ಕಿಶೋರ ಕೈಲಾಗುವುದಿಲ್ಲ ಎಂದು ಪಟ್ಟುಹಿಡಿದಿರುವುದು ಗೋಡೆಯ ಮೇಲೆ ಬರೆದಷ್ಟು ಸ್ಪಷ್ಟವಾಗಿದೆ. ಆದರೂ ಅವನು ಸುಧಾರಿಸುತ್ತಾನೆ ಎಂದು ನಂಬುತ್ತಿದ್ದೀರಿ – ಇದೆಲ್ಲಿಂದ ಬರುತ್ತಿದೆ?' ಎಂದೆ. ಮಾತಾಡುತ್ತ ಸಮಸ್ಯೆಯ ಮೂಲ ಪ್ರತ್ಯಕ್ಷವಾಯಿತು.

ಕೀರ್ತಿಯು ತಾಯ್ತಂದೆಯರ ಆಸರೆಯಲ್ಲಿ ಭದ್ರಭಾವದಿಂದ ಬೆಳೆದಿದ್ದಾಳೆ. ಹಾಗಾಗಿ ತನಗೆ ಬೇಕಾದುದನ್ನು ಪಡೆಯಬೇಕಾದರೆ ಪರಿಶ್ರಮ ಪಡಬೇಕು, ಹಾಗೂ ಸೋಲಿಸುವ ಸವಾಲುಗಳು ಎದುರಾದರೆ ಧೃತಿಗೆಡದೆ ಮುಂದುವರಿಯಬೇಕು ಎಂದು ಅರಿತಿದ್ದಾಳೆ. ಹಾಗಾಗಿ ಕಿಶೋರನಿಂದ ಬರುವ ನೇತ್ಯಾತ್ಮಕ ನಡತೆಯನ್ನು ತನ್ನದೇ ಸವಾಲುಗಳು ಎಂದುಕೊಳ್ಳುತ್ತ, ಅದರಾಚೆಯ ಗೆಲುವನ್ನು ಕಲ್ಪಿಸಿಕೊಳ್ಳುತ್ತಾಳೆ. ಪರಿಶ್ರಮ ಪಟ್ಟರೆ ಬೇಕಾದುದು ಸಿಕ್ಕೇಸಿಗುತ್ತದೆ! ಹಾಗಾಗಿ ಅವನ ದೋಷಗಳನ್ನು ತನ್ನ ಹೆಗಲ ಮೇಲೆ ಛಲಬಿಡದ ತ್ರಿವಿಕ್ರಮನಂತೆ ಹೊರುತ್ತ ಆಶಾವಾದಿ ಆಗುತ್ತಾಳೆ. ಇಲ್ಲಿ ಕಿಶೋರನ ಬಾಂಧವ್ಯವು ಕೊಡುವ ಖುಷಿಗಿಂತ ಆತನ ಸವಾಲುಗಳನ್ನು ಎದುರಿಸಲು ಪರಿಶ್ರಮ ವಹಿಸುವುದೇ ಹೆಚ್ಚು ಅಪ್ಯಾಯಮಾನ ಆಗಿದೆ. ಹಾಗಾಗಿ ಅವನ ಅವಗುಣಗಳು ಅವಳನ್ನು ಹಿಮ್ಮೆಟ್ಟಿಸುವುದರ ಬದಲು ಹತ್ತಿರ ಸೆಳೆಯುತ್ತಿವೆ! ಕೀರ್ತಿಯ ಒಂಟಿತನವೂ ಇಲ್ಲಿಯೇ ತಳಕು ಹಾಕಿಕೊಂಡಿದೆ. 'ಒಂಟಿತನ' ಎಂದರೆ ಕಿಶೋರನಿಂದ ದೂರವಾಗುವ ಭಯವಲ್ಲ; ಅವನ ಸಮಸ್ಯೆಗಳಿಂದ ದೂರವಾಗುವ, ತನ್ಮೂಲಕ ತನ್ನ ಪರಿಶ್ರಮದ ಸಾಮರ್ಥ್ಯದಿಂದ ದೂರವಾಗುವ ಭಯ!

ಕಿಶೋರನ ಗುಣಸ್ವಭಾವಗಳು ಇದಕ್ಕೆ ವಿರುದ್ಧವಾಗಿವೆ. ಅವನ ಬಗೆಗೆ ಹೆಚ್ಚಿನ ಮಾಹಿತಿ ಇಲ್ಲವಾದರೂ ಅವನು ಏಕಾಂಗಿ ಭಾವವನ್ನು ಹೊಂದಿದ್ದು ಆತಂಕವನ್ನು ಎದುರಿಸಲು ಭಯಪಡುತ್ತಾನೆ ಎಂಬುದಂತೂ ಸ್ಪಷ್ಟವಾಗಿದೆ. ಅವನ 'ಅವಗುಣಗಳು' ಎಂದು ಅಂದುಕೊಂಡಿರುವಂಥವು ಹಿಂದೊಂದು ಕಾಲದಲ್ಲಿ ಅವನನ್ನು ಕಾಪಾಡಿದ್ದು, ಈಗ ಅವುಗಳನ್ನು ಬಿಟ್ಟುಕೊಡುವುದೇ ಆತನಿಗೆ ಆತಂಕ, ಒತ್ತಡ ತರುತ್ತಿದೆ. ಹೀಗಾಗಿ ಅವನು ಬದಲಾಗಲು ತಯಾರಿಲ್ಲ.

ಒಟ್ಟಿನಲ್ಲಿ ಕಿಶೋರನನ್ನು ಬದಲಾಯಿಸುವುದೇ ತನ್ನ ಬದುಕು ಎಂದು ಕೀರ್ತಿ ಪರಿಶ್ರಮಿಸಿದರೆ, ಬದಲಾದರೆ ಉಳಿವಿಲ್ಲ ಎನ್ನುವಂತೆ ಕಿಶೋರ ವರ್ತಿಸುತ್ತಿದ್ದಾನೆ. ಇಬ್ಬರೂ ವಿರುದ್ಧ ದಿಕ್ಕಿನಲ್ಲಿರುವಾಗ ಪರಿಹಾರ ಎಲ್ಲಿದೆ?

ಸತ್ಯದರ್ಶನ ಆದರೂ ಕಿಶೋರನ ದರ್ಶನವಾಗದೆ ಇದ್ದಾಗ ತಡೆಯಲಾಗದೆ ಕೀರ್ತಿ ಮನೆಗೆ ಕರೆಮಾಡಿದಳು. ಅತ್ತೆ ಉತ್ತರಿಸಿದರು: 'ಕಿಶೋರ ಇಲ್ಲೇ ಇದ್ದಾನೆ. ಮಳೆ ಬಂತು ಅಂತ ಸಂಜೆಯೇ ಮನೆಗೆ ಬಂದಿದ್ದಾನೆ.' ಕೀರ್ತಿ ತನ್ನ ಕಿವಿಗಳನ್ನು ನಂಬದೆ ದಿಗ್ಭ್ರಮೆಗೊಂಡಳು. ನಿರ್ಧಾರಕ್ಕೆ ಬಂದು ಎದ್ದೇಳುತ್ತ ಹೇಳಿದಳು. 'ನಾಳೆಯೇ ಮನೆ ಬಿಟ್ಟು ಬೇರೆ ವಾಸಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತೇನೆ.'

ಬಾಗಿಲಾಚೆ ಕಾಲಿಡುತ್ತ ಕೀರ್ತಿ ಕೇಳಿದಳು: 'ಕಿಶೋರ ಇವೊತ್ತು ಬರುವುದಿಲ್ಲ ಅಂತ ನಿಮಗೆ ಮುಂಚೆಯೇ ಹೇಗೆ ಗೊತ್ತಾಯಿತು?' ನಾನು ಸುಮ್ಮನೇ ನಕ್ಕೆನಷ್ಟೆ.

**ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ).**